# ಪಾಲಿಸೆಮ್ಮ ಮುದ್ದು ಶಾರದೆ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 21.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 385.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 374.
4. **Note:** The wordings given without highlights are as per Ref. 1. The wordings in Ref. 2 are similar to Ref. 1 except few differences which are marked in yellow highlights. The wordings in Ref. 3 are similar to and a mix of Ref. 1 & Ref. 2.
5. **Note:** Singer has followed the lyrics as in Ref. 2 / Ref. 3.
6. **Note:** The Ankitas are different in these books. We have considered Ref.1 as standard and taken that Ankita for listing.

ರಾಗ ಮುಖಾರಿ ತಾಳ ಆದಿ

ಪಾಲಿಸೆಮ್ಮ ಮುದ್ದು ಶಾರದೆ
ಎನ್ನ ನಾಲಿಗೆಯಲಿ ನಿಲ್ಲಬಾರದೆ || ಪ ||
(ಎನ್ನ ನಾಲಿಗೆಯಲಿ ತಪ್ಪು ಬಾರದೆ)

ಲೋಲಲೋಚನೆ ತಾಯೆ
ನಿರುತ ನಂಬಿದೆ ನಿನ್ನ || ಅಪ ||

ಅಕ್ಷರಕ್ಷರ ವಿವೇಕವಾ ನಿನ್ನ
ಕುಕ್ಷಿಯೊಳೀರೇಳು ಲೋಕವ
ಸಾಕ್ಷಾತು ರೂಪದಿಂದ
ಒಲಿದು ರಕ್ಷಿಸು ತಾಯೆ || ೧ ||

ಶೃಂಗಾರ ಪುರ ನೆಲೆವಾಸಿನೀ ದೇವಿ
ಸಂಗೀತ ಗಾನ ವಿಲಾಸಿನೀ
(ಭೃಂಗಕುಂತಳೆ ತಾಯೆ) (ಮಂಗಳ ಗಾತ್ರೆ ತಾಯೆ)
ಭಳಿರೆ ಬ್ರಹ್ಮನ ರಾಣಿ || ೨ ||

(ಸರ್ವಾಲಂಕಾರಮಯ ಮೂರುತಿ
ನಿನ್ನ ಚರಣವ ಸ್ತುತಿಸುವೆ ಕೀರುತಿ
ವರದ ಪುರಂದರ ವಿಠ್ಠಲನ ಸ್ತುತಿಸುತ) || ೩ ||
(ಸರ್ವಾಲಂಕಾರ ದಯಾ ಮೂರುತಿ
ನಿನ್ನ ಚರಣವ ಸ್ಮರಿಸುವೆ ಕೀರುತಿ
ಗುರುಮೂರ್ತಿ ಪುರಂದರ ವಿಠಲನ್ನ ಸ್ಮರಿಸುವೆ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಅಕ್ಷರಕ್ಷರ ವಿವೇಕವ** – ಅಕ್ಷರವೆಂದರೆ ನಾಶವಿಲ್ಲದಿರುವ ಮುಕ್ತಿ, ಕ್ಷರವೆಂದರೆ ಇದ್ದು ಹೋಗುವ ಪ್ರಾಕೃತಿಕ ಸಂಪತ್ತು, ಇವೆರಡರ ನಡುವೆ ಇರುವ ಭೇದವನ್ನು ಮನಗಾಣುವುದು ವಿವೇಕ; ನಿತ್ಯಾನಿತ್ಯ ವಸ್ತು ವಿವೇಕವೆಂದೂ ಕರೆಯುತ್ತಾರೆ. ಆಧ್ಯಾತ್ಮಿಕ ಸಾಧನೆಯಲ್ಲಿ ಇದು ಮುಖ್ಯವಾದ ಅಂಗ.

**ನಿಮ್ಮ ಕುಕ್ಷಿಯೊಳೀರೇಳು ಲೋಕವ** – ದೇವಿಯ ಹೊಟ್ಟೆಯೊಳಗೆ ಹದಿನಾಲ್ಕು ಲೋಕಗಳೂ (ಈರೇಳು, ಎರಡು ಏಳು) ಅಡಗಿವೆ.

**ಸರ್ವಾಲಂಕಾರಮಯ ಮೂರುತಿ** = ಇದರಲ್ಲಿ ದಾಸರು ಶ್ಲೇಷವನ್ನು ತೋರಿಸಿದ್ದಾರೆ. ಎಲ್ಲ ಆಭರಣಗಳಿಂದ ಕೂಡಿದವಳು ಅಲ್ಲದೆ ಇವಳು ವಾಣೀದೇವಿಯಾದುದರಿಂದ ಎಲ್ಲ ಕಾವ್ಯಾಲಂಕಾರಗಳನ್ನು ಹೊಂದಿದವಳು

**Classification:** Keerthane
**Ankita:** varada purandara vittala
**Location:** Sringeri, Karnataka. The main deity here is Sharadambe. Situated on the banks of River Tunga. Sringeri Sharada Peetha was established in 8th Century AD by Sri Adi Shankaracharya.
**Category:** Saraswati Stuti, Pooja Tatva

**Sub-Category:** saraswati, sharada, nalige, akshara, loka, tayi, sangeeta, mangala, brahma, daya,

**Pravachana:** NA

**Explanation:** NA